ಶ್ರೀ ಜೆ ಎಚ್. ಪಟೇಲ್.—ಸರ್ಕಾರ ಕಾರ್ಖಾನೆಗೆ ಅನುಮತಿಯನ್ನು ಕೊಡುವುದಕ್ಕಿಂತ ಮುಂಚೆ ಪರಿಸರ ಮಾಲಿನ್ಯವನ್ನು ನಿಯಂತ್ರಣ ಮಾಡತಕ್ಕಂತಹ ಸಮಿತಿಯ ಅಭಿಪ್ರಾಯವನ್ನು ಪಡದೇ ನಂತರ ಅವುಗಳಿಗೆ ಅನುಮತಿಯನ್ನು ಕೊಡತಕ್ಕಂತಹದ್ದು. ಆದರೆ ಈಗ ಮಾನ್ಯ ಸದಸ್ಯರು ಹೇಳತಕ್ಕಂತಹ ವಿಚಾರದಲ್ಲಿ ಮತ್ತೊಮ್ಮೆ ಪರಿಸರ ಮಾಲಿನ್ಯದ ಸಮಿತಿಯವರ ಅಭಿಪ್ರಾಯವನ್ನು ಪಡೆದು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ

ಶ್ರೀ ಎಂ. ಎಸ್. ಪಾಟೀಲ್.— ಹುಕ್ಕೇರಿ ತಾಲ್ಲೂಕಿನ ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ, ಒಕ್ಕಲುತನದ ಪ್ಲಾಟುಗಳಿಗೆ ಹೋಗುವ ದಾರಿಯ ನಿರ್ಮಾಣ, ಸ್ಮಶಾನ ಕ್ಕಾಗಿ ನಿಗದಿ ಮಾಡಿದ ಸ್ಥಳ ತೋರಿಸುವುದು, ಹಾಗೂ ದಡ್ಡಿ-ನಾಗನೂರ್ ಪುನರ್ನಿವೇಶನ ಕೇಂದ್ರದ ಯಾತ ನೀರಾವರಿ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸುವುದು. ಈ ವಿಷಯಗಳನ್ನು ಸರ್ಕಾರದ ಇಲಾಖೆಯಿಂದ ಗಣನೆಗೆ ತೆಗೆದುಕೊಳ್ಳದೆ ಇರುವುದರಿಂದ, ಆದಷ್ಟು ಶೀಘ್ರವಾಗಿ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ

ಚಿತಾಪುರದಲ್ಲಿ ತರಕಾರಿ ಮಾರ್ಕೆಟ್‌ಗೆ ನಿವೇಶನವನ್ನು ಕಾಮಗಾರಿ ಇಲಾಖೆಯಿಂದ ಟೌನ್ ಮುನಿಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸುವುದು.

ಶ್ರೀ ಕೆ. ಬಿ. ಶಾನಪ್ಪ.— ಇದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಿಗೆ ಸಂಬಂಧಪಟ್ಟದ್ದು. ಗುಲ್ಬರ್ಗ ಜಿಲ್ಲೆಯಲ್ಲಿ ಚಿತಾಪುರ ತಾಲ್ಲೂಕು ಒಂದು ತಾಲ್ಲೂಕು. ಅಲ್ಲಿ ೨-೩ ವರ್ಷಗಳಿಂದ ತರಕಾರಿ ಮಾರತಕ್ಕಂತಹ ಜನ ಅವರಿಗೆ ಮಾರ್ಕೆಟಿಂಗ್ ಸೌಲಭ್ಯ ಬೇಕಾಗಿದೆ. ಅಲ್ಲಿದ್ದ ಲೋಕೋಪಯೋಗಿ ಇಲಾಖೆಗೆ ಸೇರಿದ ಒಂದು ಸಣ್ಣ ನಿವೇಶನವನ್ನು ಪುರಸಭೆಯವರ ವಶಕ್ಕೆ ಕೊಡಲು ಬೇಡಿಕೊಂಡಿದ್ದರೂ ಅದು ಇದುವರೆವಿಗೂ ಅವರ ವಶಕ್ಕೆ ಬಂದಿಲ್ಲ. ಇದಕ್ಕಾಗಿ ಲೋಕೋಪಯೋಗಿ ಇಲಾಖೆಯವರು ೪೦ ಸಾವಿರ ರೂಪಾಯಿಗಳನ್ನು ಪುರಸಭೆಯವರು ತುಂಬ ಬೇಕೆಂಬ ಒಂದು ಪರತ್ತನ್ನು ಹಾಕಿದ್ದಾರೆ. ಇದರ ಬಗ್ಗೆ ಮಂತ್ರಿಗಳಿಗೂ ಕೂಡ ಬರೆದದ್ದಾಯಿತು. ವಿಶ್ವನಾಥ ಪಾಟೀಲ್‌ರವರೂ ಕೂಡ ಇದರ ಬಗ್ಗೆ ಆಸಕ್ತಿವಹಿಸಿ ಕಳೆದ ೨-೩ ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಪುರಸಭೆಯವರು ಲೋಕೋಪಯೋಗಿ ಇಲಾಖೆಯವರು ಕೇಳಿದ ೪೦ ಸಾವಿರ ರೂಪಾಯಿಗಳನ್ನು ಪ್ರತಿ ವರ್ಷ ೧೦ ಸಾವಿರ ರೂಪಾಯಿಗಳಂತೆ ೪ ವರ್ಷದಲ್ಲಿ ತುಂಬಿ ಕೊಡುತ್ತೇವೆಂದೂ ಕೂಡ ಒಪ್ಪಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ನಿವೇಶನ ನಾನು ಇದುವರೆವಿಗೂ ನಗರಾಡಳಿತ ಸಚಿವರಿಗೆ ಸಂಬಂಧಪಟ್ಟದ್ದು ಎಂಬುದಾಗಿ ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸದಸ್ಯರು ಹೇಳಿದ್ದರಿಂದ ಈಗ ಅರ್ಥವಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಪುರಸಭೆಗೆ ಆ ನಿವೇಶನ ವರ್ಗಾವಣೆಯಾಗಬೇಕು, ಇದರ ಬಗ್ಗೆ ನಾನೂ ಮಾನ್ಯ ನಗರಾಡಳಿತ ಸಚಿವರು ಹಾಗೂ ಸನ್ಮಾನ್ಯ ಸದಸ್ಯರು ಕಳಿತುಕೊಂಡು ಅಧಿಕಾರಿಗಳನ್ನು ಕರೆಯಿಸಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

ಶ್ರೀ ಡಿ. ಎ. ಜಿನ್ನಪ್ಪ.— ಮಾನ್ಯ ಅಧ್ಯಕ್ಷರೇ, ಸೋಮವಾರಪೇಟೆ ತಾಲ್ಲೂಕು ಬಿಟ್ಟಿಪುರ, ಅಗಳಿ ಕೋಟಿಗನಹಳ್ಳಿ, ಇಷ್ಟುಎಳಲೆ, ಬಾಜಾಪುರ ಹಾಗೂ ಬೇಸೂರು ಪಂಚಾಯ್ತಿಗೆ ಸೇರಿದ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ತೀವ್ರವಾಗಿದ್ದು ನಾಗರೀಕರ ಆಸ್ತಿ ಪಾಸ್ತಿಗಳಿಗೆ ತುಂಬಾ ಹಾನಿಯಾಗಿದ್ದು ಈ ರೀತಿಯ ಹಾವಳಿ ಸುಮಾರು ೪ ತಿಂಗಳಿಂದ ನಡೆಯುತ್ತಿದೆ. ಇದರಿಂದ ಲಕ್ಷಗಟ್ಟಲೆ ಆಸ್ತಿ ಪಾಸ್ತಿ ನಷ್ಟವಾಗಿದೆ. ಇದರ ಸರ್ವೆ ನಂಬರ್ ೧೨೫ : ೯೧, ೧೨೨, ೧೨೩ : ೧, ೧೨೫ : ೧೪೯, ೧೨೫ : ೧೫೦ : ೪

೧೨೫ : ೧೫೧, ೧ : ೧, ೪ : ೧ ಹಾಗೂ ೫ : ೨ ಇಲ್ಲಿ ಕಳೆದ ೪ ತಿಂಗಳಿಂದ ಹಾವಳಿಯಾಗುತ್ತಿದ್ದರೂ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಜನ ಊರು ಬಿಡುವ ಪ್ರಸಂಗ ಬಂದಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಉದ್ದೇಶಕ್ಕಾಗಿ ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇಷ್ಟು ಅಲ್ಲದೆ ನಷ್ಟ ಹೊಂದಿದವರಿಗೆ ಸೂಕ್ತ ಪರಿಹಾರವನ್ನು ಕೂಡ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ವಿ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮೇಲ್ಮನೆಯಲ್ಲಿ ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಪ್ರಶ್ನೆಯನ್ನು ಕೇಳಿದ್ದರು. ಅವರಿಗೆ ಕೊಟ್ಟಂಥ ಉತ್ತರವನ್ನೇ ಇಲ್ಲೂ ಕೊಡುತ್ತೇನೆ. ಅದು ಈ ರೀತಿ ಇದೆ :

ಕಟ್ಟಿಪುರ ಅರಣ್ಯದ ಎಸ್ಟೇರ್ಣ ೮೨೦ ೦೦ ಹೆ.ಗಳಾಗಿದ್ದು ಇದರ ಒಂದು ಕಡೆ ಪೈಸಾರಿ ಜಾಗವಿದ್ದು, ಅದು ಒಂದೇ ಅತಿಕ್ರಮಣ ಸಾಗುವಳಿಯಾಗಿದೆ ಅಥವಾ ಸಾಗುವಳಿ ಚೀಟಿಯನ್ನು ಕೊಡಲ್ಪಟ್ಟಿದೆ. ಈ ಅರಣ್ಯ ಪ್ರದೇಶದಲ್ಲಿ ಎರಡು ಆನೆಗಳ ಹಿಂಡುಗಳಿಗೆ. ಇವುಗಳು ಹೇಮಾವತಿ ನದಿಗೆ ನೀರಿಗೋಸ್ಕರ ಹೋಗುವುವು. ಈ ಆನೆಗಳು ನೀರು ಕುಡಿಯಲು ಹೋಗುವಾಗ್ಗೆ ಮೇಲೆ ಹೇಳಿದ ಪ್ರಾಸಗಿ ಜಮೀನುಗಳನ್ನು ಹಾದುಹೋಗುವುದು ಅನಿವಾರ್ಯವಾಗಿದೆ. ಇದರಿಂದ ಸದರಿ ಸಾಗುವಳಿ ಸಲುಗಳಿಗೆ ಹಾನಿಯುಂಟಾಗಿದೆ. ಇದುವರೆಗೂ ಕಾಡಾನೆಗಳಿಂದಾದ ಎಲ್ಲಾ ಆಸ್ತಿಪಾಸ್ತಿಗಳ ಹಾನಿಗಳಿಗೆ ಅರಣ್ಯ ಇಲಾಖೆಯು ಪರಿಹಾರವನ್ನು ಕೊಟ್ಟಿದೆ ೧೯೮೫-೮೬ನೆಯ ಸಾಲಿನಲ್ಲಿ ಇಂತಹ ೮೬ ಘಟನೆಗಳಲ್ಲಿ ಫಸಲು ನಷ್ಟಕ್ಕೆಂದು ರೂ. ೪೪,೦೦೦ (ಸುಮಾರು) ಪರಿಹಾರವನ್ನು ಕೊಡಲಾಗಿದೆ.

ಮಾಡಿಕೇರಿಯ ಉಪ ಅರಣ್ಯ ವಿಭಾಗಾಧಿಕಾರಿಗಳು ಕೊಣಗಾನಹಳ್ಳಿಯ ಸರ್ವೆ ನಂ. ೪-೧, ೫-೨ರಲ್ಲಿ ಕಾಡಾನೆಗಳಿಂದುಂಟಾದ ಹಾನಿಗಳ ಸಂಬಂಧದಲ್ಲಿ ಕೂಡ್ಲಿಪೇಟೆ ಹೋಬಳಿ ಕಟ್ಟಿಪುರದ ಶ್ರೀ ಎಂ. ಎಂ. ಜಯದೇವ ಎಂಬುವರಿಗೆ ತಮ್ಮ ಚೆಕ್ ನಂ ಬಿ. ಸಿ. ೫೧೨೦ ತಾ. ೧-೨-೮೪ರ ಮೂಲಕ ರೂ. ೧೦೮೦-೦೦ವನ್ನು ಪರಿಹಾರವಾಗಿ ಕೊಟ್ಟಿರುತ್ತಾರೆ. ಇದು ೧೦ ತೆಂಗಿನ ಮರ ಮತ್ತು ೫೦ ಹಲಸಿನ ಮರಗಳ ಹಾನಿಗೆ ಸಂಬಂಧಪಟ್ಟದ್ದಾಗಿರುತ್ತದೆ.

ಅಡಿಕೆ ಮರಗಳಿಗೆ ಯಾವುದೇ ಹಾನಿಯಾಗಿರುವುದಿಲ್ಲ. ಇನ್ನುಳಿದ ಸರ್ವೆ ನಂಗಳಾದ ೧೨೫, ೯೧, ೧೨೨, ೨೨-೩, ೧೨೫, ೧೪೯, ೧೫೭ಎ ಮತ್ತು ೧೨-೩, ೧೫೧, ೫-೨ಗಳಲ್ಲಿ ಉಂಟಾಗಿರುವ ಹಾನಿಗಳಿಗೆ ಸೋಮವಾರಪೇಟೆಯ ವಲಯಾರಣ್ಯ ಅಧಿಕಾರಿಗಳು, ಪರಿಹಾರಧನವನ್ನು ಮಂಜೂರು ಮಾಡಲು ತನಿಖೆಯನ್ನು ಮಾಡುತ್ತಿದ್ದಾರೆ.

ಪರಿಹಾರವನ್ನು ಕೊಡಲಾದ ಇತರರು ಯಾರೆಂದರೆ,—

ಹಿಪ್ಪುಗಳಲೆಯ ಶ್ರೀ ಎಂ. ಎಂ. ಮಹಂತಪ್ಪ, ಇವರು ಶ್ರೀ ಎಂ. ಎಂ. ಜಯದೇವ ಅವರ ತಂದೆ ಇವರಿಗೆ ತಾ ೧-೨-೮೪ರಲ್ಲೂ ರೂ. ರೂ. ೧೦೮೦-೦೦ವನ್ನು ಕೊಡಲಾಗಿದೆ. ಶ್ರೀ ಎಸ್. ಪುಟ್ಟಸ್ವಾಮಿ ಆಗಲಿ, ರೂ. ೧೦೦೦.೦೦ ತಾ. ೨೦-೩-೮೫ಕ್ಕೆ ಶ್ರೀ ಎಸ್. ಬಿ. ಪ್ರಸನ್ನ, ಶ್ರೀ ಎಸ್. ಪುಟ್ಟಸ್ವಾಮಿಯವರ ಮಗ ರೂ. ೧೦೦೦-೦೦ ತಾ. ೨೦-೩-೮೫.

ಈ ಸ್ಥಳಗಳಿಂದ ಆನೆಗಳನ್ನು ಓಡಿಸುವ ಕಾರ್ಯಕ್ಕಾಗಿಯೆ ಅರಣ್ಯ ಇಲಾಖೆಯು ಅರಣ್ಯ ರಕ್ಷಕರನ್ನು ನೇಮಿಸಿದೆ. ಕಟ್ಟಿಪುರ ಕಾವೇರಿಪಟ್ಟಣ ಅರಣ್ಯದ ಸುತ್ತಲೂ ಆನೆಗಳ ಹಿಡುವಳಿ ಜಮೀನುಗಳಿಗೆ ದಾಟಿ ಬಾರದಿರಲು ಕಂದಕಗಳನ್ನು ತೋಡಿಸುವುದು ಮತ್ತು ಬಿದಿರು ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಯೋಜಿಸಲಾಗಿದೆ.

ಆನೆಗಳ ಹಾವಳಿಗೆ ತುತ್ತಾದ ಗ್ರಾಮಸ್ಥರು, ತಮ್ಮ ಜಮೀನುಗಳಿಗೆ ಯೋಗ್ಯ ಪರಿಹಾರ ದೊರೆತಲ್ಲಿ ಅವನ್ನು ಸರ್ಕಾರಕ್ಕೆ ಒಪ್ಪಿಸಲು ಸಿದ್ಧರೆಂದು ಇತ್ತೀಚೆಗೆ, ಇತ್ತೀಚೆಗೆ, ಎಂದರೆ ಫೆಬ್ರುವರಿ ೮೫ರಲ್ಲಿ ಅವರು ಸಲ್ಲಿಸಿದ ಮನವಿಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಅರಣ್ಯ ಮತ್ತು ಕಂದಾಯ ಇಲಾಖೆಗಳು ಕೂಲಂಕುಷವಾಗಿ ಸಮಾಲೋಚನೆ ನಡೆಸುತ್ತಿದ್ದಾರೆ.

ಅಧ್ಯಕ್ಷರು.—ಶ್ರೀ ಎಸ್. ಕಾಹಲಗಿ, ಸದಸ್ಯರು ಗೈರುಹಾಜರು. ಶ್ರೀ ಕೆ. ಕುಶಾಲ ಮಾತನಾಡಬಹುದು.